ಓ.ಎಸ್.ನಂಃ 82/2022

ಪಿಡಬ್ಲ್ಯೂ-2

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 12.03.2025 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: 1ನೇ ಪ್ರತಿವಾದಿ ಪರ ಶ್ರೀ ಎಂ ಬಿ ಜಿ ವಕೀಲರಿಂದಃ**

ನನಗೆ ವಾದಿ ಸು 20 ವರ್ಷಗಳಿಂದ ಪರಿಚಯ. ವಾದಿಯು ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಶ್ರೀನಿವಾಸ ರವರ ವಿರುದ್ದ ಅಸಲು ದಾವೆ ಸಂಖ್ಯೆ 57/2022ರಂತೆ ದಾವೆ ಸಲ್ಲಿಸಿದು ಅದರಲ್ಲೂ ಸಹ ನಾನು ಸಾಕ್ಷಿದಾರರಾಗಿ ವಿಚಾರಣೆ ನೀಡಿದ್ದೇನೆ ಎಂದರೆ ಸರಿ. ಸದರಿ ದಾವೆ ಸಹ ಹಣ ವಸೂಲಾತಿಗಾಗಿ ಹೂಡಿರುತ್ತಾರೆ ಎಂದರೆ ಸರಿ. ಈ ದಾವೆಯನ್ನು ಹಣ ವಸೂಲಾತಿಗಾಗಿ ಹೂಡಿರುತ್ತಾರೆ. ಈ ದಾವೆಯನ್ನು ಶ್ರೀನಿವಾಸ ಮತ್ತು ಶಿವಶಂಕರ ರವರ ಇಬ್ಬರ ಮೇಲೆ ದಾವೆ ಹೂಡಿರುತ್ತಾರೆ. ಪ್ರತಿವಾದಿಯು ವಾದಿಯಿಂದ ಸು 20 ಸಾವಿರ ಹಣ ಪಡೆಯುವಾಗ ನಾನು ಹಾಜರಿರಲಿಲ್ಲ. ನಾನು ಪ್ರತಿವಾದಿಗೆ ವಾದಿಗೆ ಬರೆದುಕೊಟ್ಟಿರುವ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿಲ್ಲ. ಪ್ರತಿವಾದಿ ವಾದಿಗೆ ಬರೆದುಕೊಟ್ಟಿರುವ ಪತ್ರವನ್ನು ನಾನು ನೋಡಿದ್ದೇನೆ. ನಿಪಿ1 ಪತ್ರಕ್ಕೆ ಯಾರು ಯಾರು ಸಹಿ ಮಾಡಿದ್ದಾರೆ ನನಗೆ ಗೊತ್ತಿಲ್ಲ. ನಿಪಿ1 ಪತ್ರವನ್ನು ಸರ್ವೇ ನಂಃ 108/1 ರ ವಿಸ್ತೀರ್ಣ 17 ಗುಂಟೆಗೆ ಸಂಬಂಧಪಟ್ಟಂತೆ ಬರೆಯಲಾಗಿರುತ್ತದೆ. ನಿಪಿ1 ರ ಪತ್ರವನ್ನು ಮಹದೇವಕುಮಾರ್ ವಕೀಲರು ಬರೆದಿರುತ್ತಾರೆ. ಸದರಿ ಪತ್ರವನ್ನು ಎಷ್ಟು ವರ್ಷಕ್ಕಾಗಿ ಬರೆಯಲಾಗಿದೆ ನನಗೆ ಗೊತ್ತಿಲ್ಲ. ನಾನು 10ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ1 ರಲ್ಲಿ 3 ತಿಂಗಳು ಕಾಲಾವಧಿ ನಿಗದಿ ಮಾಡಲಾಗಿದೆ ಎಂದರೆ ಸರಿ. ನಿಪಿ1ಕ್ಕೆ ಯಾರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ನನಗೆ ಗೊತ್ತಿಲ್ಲ.

ದಿಃ 18.01.2022 ರಲ್ಲಿ ಮುಂದುವರಿದ ಕರಾರನ್ನು ವಾದಿ ಮತ್ತು ಪ್ರತಿವಾದಿ ಮಾಡಿಕೊಂಡಿರುತ್ತಾರೆ. ಮುಂದುವರಿದ ಕರಾರನ್ನು ನಂಜನಗೂಡಿನ ವಕೀಲರ ಕಚೇರಿಯಲ್ಲಿ ಮಾಡಲಾಗಿರುತ್ತದೆ. ಮುಂದುವರಿದ ಕರಾರು ಮಾಡುವಾಗ ಶಿವಶಂಕರ, ಶ್ರೀನಿವಾಸ, ಸೋಮಶೇಖರ, ಮಹೇಶ, ನಾನು ಮತ್ತು ಮಹದೇವಕುಮಾರ ವಕೀಲರು ಹಾಜರಿದ್ದು, ಸಹಿ ಮಾಡಿರುತ್ತೇವೆ. ನಿಪಿ2 ಪತ್ರದ ಛಾಪಾ ಕಾಗದವನ್ನು ವಾದಿಯು ತಂದಿರುತ್ತಾರೆ. 1ನೇ ಪ್ರತಿವಾದಿಯು ವಾದಿಯಿಂದ ಯಾವುದೇ ಹಣ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ ಮತ್ತು

ಯಾವುದೇ ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯು ಈ ದಾವೆಯಲ್ಲಿ ಹಾಜರು ಮಾಡಿರುವ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ಹಾಜರು ಮಾಡಿರುವ ದಾಖಲೆಗಳನ್ನು ಅವರೇ ಈ ದಾವೆಗೋಸ್ಕರ ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ವಾದಿ ಮತ್ತು 1ನೇ ಪ್ರತಿವಾದಿ ನಡುವೆ ಎಷ್ಟು ಪತ್ರ ಆಗಿತ್ತು ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳ ನಡುವೆ ಆಗಿರುವಂತಹ 2 ಪತ್ರಗಳಿಗೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ನಾನು ವಾದಿ ಮಾಡಿರುವ ಎಲ್ಲಾ ಪತ್ರಗಳಿಗೂ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ಹೊರತುಪಡಿಸಿ ಬೇರೆ ಒಂದು ಅಥವಾ ಎರಡು ಪ್ರಕರಣದಲ್ಲಿ ಪತ್ರಗಳಿಗೆ ಸಂಬಂಧಪಟ್ಟಂತೆ ನಾನು ಸಾಕ್ಷಿಯಾಗಿ ಸಹಿ ಮಾಡಿರಬಹುದು. ನನ್ನ ಸಮಕ್ಷಮ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ವಾದಿಯು ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತಾರೆ. ವಾದಿಯು ಪ್ರತಿವಾದಿಗೆ ರೂ.1,50,000/- ಹಣ ಕೊಟ್ಟಿರುತ್ತಾರೆ. ಎಷ್ಟು ಮುಖ ಬೆಲೆ ನೋಟು ಕೊಟ್ಟಿದ್ದಾರೆ ಎಂದು ನಾನು ಹೇಳಲು ಆಗುವುದಿಲ್ಲ.

ವಾದಿ ಮತ್ತು 1ನೇ ಪ್ರತಿವಾದಿ ನಡುವೆ ಆದಂತಹ ಮೌಖಿಕ ಗುತ್ತಿಗೆ ಕರಾರಿನ ಬಗ್ಗೆ ನನಗೆ ಗೊತ್ತಿಲ್ಲ. ಗುತ್ತಿಗೆ ಅವಧಿ ಮುಗಿದರೂ ಸಹ ವಾದಿ ತಮ್ಮ ಜಮೀನನ್ನು 1ನೇ ಪ್ರತಿವಾದಿಗೆ ಬಿಟ್ಟಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರವಾಗಿ 1ನೇ ಪ್ರತಿವಾದಿ ವಾದಿ ವಿರುದ್ಧ ಬೇಗೂರು ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ತನ್ನ ವಿಭಾಗಕ್ಕೆ ಬಂದ ಜಮೀನಿನಲ್ಲಿ ಕೃಷಿ ಹೊಂಡಾ ಇದ್ದು, ಅದನ್ನು 1ನೇ ಪ್ರತಿವಾದಿ ಖರ್ಚು ಮಾಡಿ ಕೃಷಿ ಹೊಂಡಾವನ್ನು ಮುಚ್ಚಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ಕೃಷಿ ಹೊಂಡಾವನ್ನು ಮುಚ್ಚಿದ್ದರಿಂದ ವಾದಿಯು ಪ್ರತಿವಾದಿ ವಿರುದ್ಧ ಈ ಸುಳ್ಳು ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ದಾವ ಆಸ್ತಿಯು 1ನೇ ಪ್ರತಿವಾದಿಗೆ ಪಿತ್ರಾರ್ಜಿತ ಆಸ್ತಿಯೋ ಅಥವಾ ಸ್ವಯಾರ್ಜಿತ ಆಸ್ತಿಯೋ ನನಗೆ ಗೊತ್ತಿಲ್ಲ. ವಾದಿಯು ಹಣವನ್ನು ಕೊಡಬೇಕು ನೀನು ಸಾಕ್ಷಿಯಾಗಿ ಸಹಿ ಮಾಡು ಎಂದು ಹೇಳಿದ್ದರಿಂದ ನಿಪಿ1 ಮತ್ತು 2 ಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ.

ಮುಂದುವರಿದ ಕರಾರು ಪತ್ರದಲ್ಲಿರುವ ವಿಚಾರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಕರಾರು ಪತ್ರದಲ್ಲಿ ಕಾಲಾಮಿತಿ ಅವಧಿಯನ್ನು ತೋರಿಸಿರುವುದಿಲ್ಲ. ಕರಾರು ಪತ್ರವು ಸ್ವಾಧೀನ ರಹಿತ ಕರಾರು ಪತ್ರವಾಗಿರುತ್ತದೆ. ದಾವ ಆಸ್ತಿಯು 1ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಯಾವುದೇ ಆಸ್ತಿಯನ್ನು ಮಾರಾಟ ಮಾಡುವ ಮೊದಲು ದಾಖಲೆಗಳನ್ನು ಪರಿಶೀಲಿಸಿ ನಂತರ ಖರೀದಿ ಮಾಡಿರುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿಗೆ ಎಷ್ಟು ಜನ ಮಕ್ಕಳು ನನಗೆ ಗೊತ್ತಿಲ್ಲ. ಕರಾರು ಪತ್ರವನ್ನು ಮಾಡುವಾಗ 1ನೇ ಪ್ರತಿವಾದಿ ಮಕ್ಕಳು ಹಾಜರಿರಲಿಲ್ಲ. 1ನೇ ಪ್ರತಿವಾದಿಗೆ ಮಕ್ಕಳು ಇರುವುದರಿಂದ ಅವರು ಸಹಿ ಮಾಡದೇ ಇರುವ ಕಾರಣ ಮತ್ತು ದಾವ ಆಸ್ತಿಯು ಪಿತ್ರಾರ್ಜಿತ ಆಸ್ತಿ ಆದ ಕಾರಣ ನಿಪಿ1 ಮತ್ತು 2 ಕರಾರು ಪತ್ರಗಳನ್ನು 1ನೇ ಪ್ರತಿವಾದಿ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಯಾವ ಕಾರಣಕ್ಕಾಗಿ ಹಣ ಪಡೆದರು ನನಗೆ ಗೊತ್ತಿಲ್ಲ.

ಈ ಪ್ರಕರಣದ ನನಗೆ ಯಾವುದೇ ವಿಚಾರ ಗೊತ್ತಿಲ್ಲ, ವಾದಿ ನನ್ನ ಸ್ನೇಹಿತರಾದ್ದರಿಂದ ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಅನುಕೂಲವಾಗಲೀ ಎಂದು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಮೈಸೂರಿನಲ್ಲಿ ವಾಸವಾಗಿರುತ್ತಾರೆ. ವಾದಿ ಮೈಸೂರಿನಲ್ಲಿ ವಾಸವಾಗಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಎ.ಎನ್.ಕಾಂತಮ್ಮ)**
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಗುಂಡ್ಲುಪೇಟೆ